# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ 7026–2022** **ಸಿ. ಡಬ್ಲುಃ 01**

**ಪಿ. ಡಬ್ಲುಃ 01**

| | |
|---|---|
| ಸಾಕ್ಷಿದಾರರ ಹೆಸರು | ಡಾ.ಎಂ.ಎಸ್.ಸುರೇಶ್ |
| ತಂದೆಯ / ಗಂಡನ ಹೆಸರು | ಸುಬ್ಬೇಗೌಡ |
| ವಯಸ್ಸು | 57 ವರ್ಷ |
| ಕೆಲಸ | ಹಿರಿಯ ತಜ್ಞರು, ಸಾರ್ವಜನಿಕ ಆಸ್ಪತ್ರೆ, ನಂಜನಗೂಡು |
| ವಾಸ | ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 20–12–2023** |

## ಮುಖ್ಯ ವಿಚಾರಣೆಃ  ಶ್ರೀ ಎಪಿಪಿ   ವಕೀಲರಿಂದಃ

ನಾನು 2017 ರಿಂದ ಇಲ್ಲಿಯವರೆವಿಗೂ ನಂಜನಗೂಡಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಹಿರಿಯ ತಜ್ಞನಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ಚಾಸಾ–2 ರಿಂದ 5 ಗೊತ್ತು. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತು. ದಿ.27–08–2020 ರಂದು ಸಂಜೆ 6.00 ಗಂಟೆ ಸಮಯದಲ್ಲಿ ಮೈಸೂರು ತಾಲ್ಲೂಕು ದೂರ ಗ್ರಾಮದ ಹುಚ್ಚಯ್ಯ ಬಿನ್ ರಾಮಯ್ಯ ಎಂಬುವವರು ಕೋವಿಡ್ ಸಂಬಂಧ ನಮ್ಮ ಆಸ್ಪತ್ರೆಗೆ ದಾಖಲಾಗಿದ್ದರು. ನಂತರ ಚಾಸಾ–2 ಮತ್ತು 3 ರವರು ದಿ.27/08/2020 ಮತ್ತು 28/08/2020 ರ 2 ದಿನಗಳ ಕಾಲ ಚಿಕಿತ್ಸೆ ನೀಡಿರುತ್ತಾರೆ. ನಂತರ ದಿ.29/08/2020 ರಂದು ಬೆಳಗ್ಗೆ 9.50 ಗಂಟೆ ಸಮಯದಲ್ಲಿ ಹುಚ್ಚಯ್ಯನವರ ಆರೋಗ್ಯದಲ್ಲಿ ಏರುಪೇರಾದ ಕಾರಣ ಅವರಿಗೆ ಚಿಕಿತ್ಸೆ ನೀಡಲೆಂದು ಚಾಸಾ–2 ರವರನ್ನು ಕುಳುಹಿಸಿಕೊಟ್ಟಿರುತ್ತೇನೆ. ಚಾಸಾ–2 ರವರು ಚಿಕಿತ್ಸೆ ನೀಡಿದ ನಂತರ ನಮ್ಮ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆ ನೀಡಲು ಸೌಲಭ್ಯವಿಲ್ಲದ ಕಾರಣ ಹೆಚ್ಚಿನ ಚಿಕಿತ್ಸೆ ಮೈಸೂರಿನ ಜಿಲ್ಲಾ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಕಳುಹಿಸಿಕೊಟ್ಟಿರುತ್ತೇನೆ. ಜಿಲ್ಲಾ ಆಸ್ಪತ್ರೆಗೆ ಹೋದ ನಂತರ ವೈದ್ಯರು ಹುಚ್ಚಯ್ಯನವರು ಬೆಳಗ್ಗೆ ಸುಮಾರು 11.00 ಗಂಟೆ ಸಮಯದಲ್ಲಿ ಮರಣ ಹೊಂದಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ ರಾಜು ಮತ್ತು ಅವರ ಸಂಗಡಿಗರು ಮಧ್ಯಾಹ್ನ 12.00 ಗಂಟೆ ಸುಮಾರಿಗೆ ನಮ್ಮ ಸರ್ಕಾರಿ ಆಸ್ಪತ್ರೆಗೆ ಬಂದು ನಾನು ಹೊರ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದ ಸಮಯ ಬೋಳಿ ಮಕ್ಕಳಾ ಸೂಳೆ ಮಕ್ಕಳ ಎಂದು ಬೈದು ನನ್ನ ಸರ್ಕಾರಿ ಕರ್ತವ್ಯಕ್ಕೆ

ಅಡ್ಡಿಪಡಿಸಿರುತ್ತಾರೆ. ನಂತರ ಚಾಸಾ–2 ಮತ್ತು 3 ರವರನ್ನು ಕರೆದು ಹುಚ್ಚಯ್ಯನವರಿಗೆ ಚಿಕಿತ್ಸೆ ನೀಡುವ ಸಮಯ ಅನುಸರಿಸಿದ ಶಿಷ್ಟಾಚಾರದ ಚಿಕಿತ್ಸೆ ಬಗ್ಗೆ ವಿವರಿಸಿದರು ಸಹ ಅವರು ಸಮಾಧಾನಗೊಳ್ಳದೆ, ವೈದ್ಯರು ಮತ್ತು ಸಿಬ್ಬಂದಿಗಳಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ. ನಂತರ ನಾನು ನನ್ನ ಕಚೇರಿಗೆ ಹೋದಾಗ ಅಲ್ಲಿಗೂ ರಾಜು ಮತ್ತು ಅವರ ಸಂಗಡಿಗರು ಬಂದು ಅಲ್ಲಿದ್ದಂತಹ ಸಿ.ಸಿ ಟಿ.ವಿ ಮತ್ತು ಡಿ.ವಿ.ಆರ್ ವೈರುಗಳನ್ನು ತೆಗೆದುಹಾಕಿರುತ್ತಾರೆ. ನನ್ನಿಂದ ಬಲವಂತವಾಗಿ ಹುಚ್ಚಯ್ಯುವರಿಗೆ ಚಿಕಿತ್ಸೆ ನೀಡಿದ ಕೇಸ್ ಶೀಟ್ ಅನ್ನು ಪಡೆದುಕೊಂಡಿರುತ್ತಾರೆ. ಪುನಃ ನಾನು ಚಾಸಾ–2 ಮತ್ತು 3 ರವರನ್ನು ಕರೆಸಿ ಸಮಾಧಾನಪಡಿಸಿದರು ಅವರುಗಳು ಸಮಾಧಾನಗೊಳ್ಳದೆ ಕೊಠಡಿಯ ಚಿಲಕವನ್ನು ಹಾಕಿ ಬೇರೆ ರೋಗಿಗಳಿಗೆ ಚಿಕಿತ್ಸೆ ನೀಡಲು ಅವಕಾಶ ಮಾಡಿಕೊಟ್ಟಿರುವುದಿಲ್ಲ. ನಂತರ ನಾನು ಪೊಲೀಸರಿಗೆ ಕರೆ ಮಾಡಿದ್ದು ಪೊಲೀಸರು ಬಂದು ಆರೋಪಿಗಳನ್ನು ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ. 1 ನೇ ಆರೋಪಿಯು ಚಾಸಾ–2 ರವರ ಕೊರಳಪಟ್ಟಿಯನ್ನು ಹಿಡಿದುಕೊಂಡಿರುತ್ತಾರೆ. ಚಾಸಾ–4 ರವರ ಮೊಬೈಲ್ ಅನ್ನು ಕಸಿದುಕೊಂಡಿರುತ್ತಾರೆ. ನಾನು ಈ ಸಂಬಂಧ ಪೊಲೀಸರಿಗೆ ದೂರನ್ನು ನೀಡಿದ್ದು, ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–1 ಎಂದು, ಸಾಕ್ಷಿ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ನಿಪಿ–1 ರ ದೂರಿಗೆ ನಮ್ಮ ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿಗಳು ಸಹಿ ಮಾಡಿರುತ್ತಾರೆ. ನಂತರ ಪೊಲೀಸರು ನಮ್ಮಗಳ ಹೇಳಿಕೆಗಳನ್ನು ಪಡೆದುಕೊಂಡಿರುತ್ತಾರೆ. ನಂತರ ಪೊಲೀಸರು ಸ್ಥಳಕ್ಕೆ ಬಂದು ಮಹಜರ್ ಮಾಡಿ ನಮ್ಮಗಳ ಸಹಿ ಪಡೆದಿರುತ್ತಾರೆ. ಸಾಕ್ಷಿಯು ಸ್ಥಳ ಮಹಜರ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಎಂದು, ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ಘಟನಾ ದಿನಾಂಕದಂದು ಗಲಾಟೆ ಮಾಡಿದ ವ್ಯಕ್ತಿಗಳು ನ್ಯಾಯಾಲಯದ ಮುಂದೆ ಇದ್ದು, ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಶ್ರೀ ಹೆಚ್.ಎನ್.ಎಂ ವಕೀಲರಿಂದ**

2020 ನೇ ವರ್ಷ ಕರೋನ ವರ್ಷ ಎಂದರೆ ಸರಿ. ದಿ.27–08–2020 ರಂದು ಹುಚ್ಚಯ್ಯನವರನ್ನು ಯಾರು ಕರೆದುಕೊಂಡು ಬಂದು ಚಿಕಿತ್ಸೆ ದಾಖಲು ಮಾಡಿದರು ಎಂದು ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ, ಆ ದಿನ ಕರ್ತವ್ಯದಲ್ಲಿ ಚಾಸಾ–3 ಹರಿಪ್ರಸಾದ್ ರವರು ಇದ್ದರು. ಚಿಕಿತ್ಸೆಗೆ ದಾಖಲಾದ ಸಮಯ ಹುಚ್ಚಯ್ಯನವರ ಆರೋಗ್ಯವಾಗಿ ಇದ್ದರೋ ಅಥವಾ ಅನಾರೋಗ್ಯವಾಗಿ ಇದ್ದರೋ ಎಂಬ ಪ್ರಶ್ನೆಗೆ ಸಾಕ್ಷಿ ಕೋವಿಡ್ ಬಂದಿದೆ ಎಂದರೆ ಅವರು ಅನಾರೋಗ್ಯದಿಂದ ಇದ್ದಾರೇ ಎಂದರ್ಥ, ಅದರೆ ಅದರ ಬಗ್ಗೆ ನಿಖರವಾಗಿ ತಿಳಿದುಕೊಳ್ಳಲು ಆ ದಿನ ಕರ್ತವ್ಯದಲ್ಲಿ ಇದ್ದ ವೈದ್ಯರನ್ನು

ಕೇಳಬೇಕು ಎಂದು ನುಡಿಯುತ್ತಾರೆ. ಹುಚ್ಚಯ್ಯನವರು ದಿ.27/08/2020 ರಿಂದ 29/08/2020 ರವರೆಗೆ ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದರು. ಹುಚ್ಚಯ್ಯನವರು ದಿ.27/08/2020 ರಿಂದ 29/08/2020 ರವರೆಗೆ ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿ.29/08/2020 ರಂದು ಬೆಳಗ್ಗೆ 7.00 ಗಂಟೆ ಸಮಯದಲ್ಲಿ ಹುಚ್ಚಯ್ಯನವರ ಅವರ ಮಗನ ಜೊತೆ ಮಾತನಾಡಿ ನಾನು ಚೆನ್ನಾಗಿ ಇದ್ದೇನೆ ನನ್ನನ್ನು ಕರೆದುಕೊಂಡು ಹೋಗಿ ಎಂದು ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ಆಗಾಗಿ 1 ನೇ ಆರೋಪಿ ರವರು ಸದರಿ ದಿನದಂದು ಕರ್ತವ್ಯದಲ್ಲಿ ಇದ್ದ ವೈದ್ಯರನ್ನು ತನ್ನ ತಂದೆಯನ್ನು ಕಳುಹಿಸಿಕೊಡುವಂತೆ ಕೇಳಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ಹುಚ್ಚಯ್ಯನವರ ಮಕ್ಕಳು ಹುಚ್ಚಯ್ಯನವರನ್ನು ಕಳುಹಿಸಿಕೊಡಿ ಎಂದು ಕೇಳಿದಾಗ ನಾನು ಮತ್ತು ಇತರೇ ವೈದ್ಯಾಧಿಕಾರಿಗಳು ಉಡಾಫೆಯ ಉತ್ತರವನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ನಂತರ 11.00 ಗಂಟೆಗೆ ಹುಚ್ಚಯ್ಯನವರ ಕುಟುಂಬದವರಿಗೆ ಕರೆ ಮಾಡಿ ಹುಚ್ಚಯ್ಯನವರು ಮರಣಹೊಂದಿದ್ದಾರೆ ಎಂದು ಮಾಹಿತಿ ನೀಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಿ.29/08/2020 ರ ಬೆಳಗ್ಗೆ 10.10 ಗಂಟೆಗೆ ನಾವು ಹುಚ್ಚಯ್ಯನವರನ್ನು ಮೈಸೂರಿನ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದು, ನಂತರ ಜಿಲ್ಲಾ ಆಸ್ಪತ್ರೆಯವರ ಹುಚ್ಚಯ್ಯನವರು ಮೃತಪಟ್ಟ ಬಗ್ಗೆ ನಮಗೆ ಮಾಹಿತಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಹುಚ್ಚಯ್ಯನವರನ್ನು ಮೈಸೂರಿನ ಜಿಲ್ಲಾ ಆಸ್ಪತ್ರೆಗೆ ದಿ.29/08/2020 ರ ಬೆಳಗ್ಗೆ 10.10 ಸಮಯಕ್ಕೆ ಕಳುಹಿಸಿಕೊಟ್ಟಿರುತ್ತೇವೆ. ನಾವು ಹುಚ್ಚಯ್ಯನವರನ್ನು ಬೆಳಗ್ಗೆ 10.10 ಕ್ಕೆ ಮೈಸೂರಿನ ಜಿಲ್ಲಾ ಆಸ್ಪತ್ರೆಗೆ ಕಳುಹಿಸುವ ಮುಂಚೆಯೇ ಹುಚ್ಚಯ್ಯನವರು ನಮ್ಮ ಆಸ್ಪತ್ರೆಯಲ್ಲಿಯೇ ಮರಣ ಹೊಂದಿದರು ಎಂದರೆ ಸರಿಯಲ್ಲ. ಹುಚ್ಚಯ್ಯನವರಿಗೆ ಸರಿಯಾದ ಚಿಕಿತ್ಸೆ ನೀಡದೇ ಇದ್ದ ಕಾರಣ ನಮ್ಮ ನಿರ್ಲಕ್ಷತನದಿಂದಲೇ ಹುಚ್ಚಯ್ಯನವರ ಮರಣಹೊಂದಿರುತ್ತಾರೆ ಎಂದರೆ ಸರಿಯಲ್ಲ. ಹುಚ್ಚಯ್ಯನವರ ಅಕ್ಕ–ಪಕ್ಕದ ಬೆಡ್‌ನಲ್ಲಿ ಇದ್ದ ರೋಗಿಗಳು ಹುಚ್ಚಯ್ಯನವರು ಕೆಳಗೆ ಬಿದ್ದರು ವೈದ್ಯಾಧಿಕಾರಿಗಳು ಬಂದು ಅವರಿಗೆ ಚಿಕಿತ್ಸೆ ನೀಡದೇ ನಿರ್ಲಕ್ಷತನವಹಿಸಿದ್ದರಿಂದ ಹುಚ್ಚಯ್ಯನವರು ಮರಣಹೊಂದಿರುತ್ತಾರೆ ಎಂದು ಹುಚ್ಚಯ್ಯನವರ ಮಕ್ಕಳಿಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ವಾಹನದ ಚಾಲಕನೂ ಸಹ ಆರೋಪಿಗಳಿಗೆ ಕರೆ ಮಾಡಿ ಹುಚ್ಚಯ್ಯನವರ ಮರಣಹೊಂದಿದ್ದರು ಜಿಲ್ಲಾ ಆಸ್ಪತ್ರೆಗೆ ಕಳುಹಿಸುತ್ತಿದ್ದಾರೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆದುದರಿಂದ ಆರೋಪಿಗಳು ನಮ್ಮಗಳ ವಿರುದ್ಧ ದೂರು ನೀಡುತ್ತೇವೆ ಎಂದು ತಿಳಿಸಿದ್ದರಿಂದ

ನಾವೇ ಆರೋಪಿಗಳ ವಿರುದ್ಧ ದೂರು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕೋವಿಡ್ ನ ಚಿಕಿತ್ಸೆ ಶಿಷ್ಟಾಚಾರಕ್ಕೆ ಅನುಗುಣವಾಗಿಯೇ ಹುಚ್ಚಯ್ಯನವರಿಗೆ ಚಿಕಿತ್ಸೆಯನ್ನು ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಆರೋಪಿಗಳು ನಮ್ಮ ವಿರುದ್ಧ ದೂರು ನೀಡುತ್ತೇವೆ ಎಂದು ತಿಳಿಸಿದ್ದರಿಂದ ನಾನು ಮತ್ತು ನನ್ನ ಸಹ ವೈದ್ಯಾಧಿಕಾರಿಗಳು ಕೊಠಡಿಯ ಬಾಗಿಲು ಹಾಕಿಕೊಂಡು ಮಾತುಕತೆ ನಡೆಸಿ ನಂತರ ಆರೋಪಿಗಳ ವಿರುದ್ಧ ದೂರು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಆರೋಪಿಯನ್ನು ಹೊರತುಪಡಿಸಿ ಉಳಿದ ಆರೋಪಿಗಳನ್ನು ಇದೇ ಮೊದಲಭಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿರುತ್ತೇನೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿಗಳು ತಮ್ಮ ಕರ್ತವ್ಯದಲ್ಲಿ ಇದ್ದರು ಎಂದರೆ ಸರಿಯಲ್ಲ. ಆರೋಪಿಗಳ ವಿರುದ್ಧ ದೂರು ದಾಖಲಿಸುವ ಉದ್ದೇಶದಿಂದ ನಾವೇ ಸಿ.ಸಿ ಟಿವಿಯ ವೈರುಗಳನ್ನು ತೆಗೆದುಹಾಕಿರುತ್ತೇವೆ ಎಂದರೆ ಸರಿಯಲ್ಲ. ಘಟನಾ ದಿನಾಂಕದಂದು ಆರೋಪಿಗಳಿಗೆ ಸೇರಿದ ಮೊಬೈಲ್ ಗಳನ್ನು ನಾವೇ ಕಸಿದುಕೊಂಡು 6 ದಿನಗಳ ನಂತರ ಮೊಬೈಲ್ ಗಳನ್ನು ಆರೋಪಿಗಳಿಗೆ ನೀಡಿರುತ್ತೇವೆ ಎಂದರೆ ಸರಿಯಲ್ಲ. ಪೊಲೀಸರಿಗೆ ನಾನು ಘಟನಾ ಸಂಬಂಧ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

2. ಮಹಜರ್ ಸಮಯ ನಾನು, ಮಣಿಕಂಠ ಮತ್ತೊಬ್ಬ ಸಾಕ್ಷಿದಾರರು ಇದ್ದರು. ಮಹಜರ್ ಅನ್ನು ಪೊಲೀಸರು ಬರೆದಿರುತ್ತಾರೆ, ಆದರೆ ಅವರು ಹೆಸರು ಗೊತ್ತಿಲ್ಲ. ಮಹಜರಿಗೆ 3 ಜನ ಸಹಿ ಮಾಡಿದ್ದು ಮತ್ತೊಂದು ದಾಖಲೆಯಲ್ಲಿ ವೈದ್ಯಾಧಿಕಾರಿಗಳು ಎಲ್ಲರೂ ಸಹಿ ಮಾಡಿರುತ್ತಾರೆ. ನಾನು ಹೇಳುವಂತೆ ಆರೋಪಿಗಳು ಅವಾಚ್ಯಶಬ್ದಗಳಿಂದ ಬೈದು ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಆಸ್ಪತ್ರೆಯ ಪಿಠೋಪಕರಣಗಳಿಗೆ ಹಾನಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/ –**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**